ಮನುಷ್ಯ ತಾನು ಪೊಳ್ಳು ಎನ್ನುವುದನ್ನು ಹೇಗೋ ಅರ್ಥ ಮಾಡ್ಕೊಂಡಿದಾನೆ. ಆದರೆ ಆ ಖಾಲಿತನವನ್ನು ದಿಟ್ಟಿಸುವುದಕ್ಕೆ ಅವನಿಗೆ ಆಗ್ತಾ ಇಲ್ಲ. ಯಾವಾಗ ನಾವು ನಮ್ಮೊಳಗಿನ ಖಾಲಿತನವನ್ನು ದಿಟ್ಟಿಸಿ ನೋಡುವ ಸ್ಥೈರ್ಯ ಪಡೆದುಕೊಳ್ಳುತ್ತೇವೆಯೋ, ಅದರ ಜೊತೆಗೆ ಮಾತಾಡಿಕೊಳ್ಳುವ ಶಕ್ತಿ ಬೆಳೆಸಿಕೊಳ್ಳುತ್ತೇವೆಯೋ ಆಗ ನಮಗೆ ನಿಜವಾಗಲೂ ಯಾವುದು ಮುಖ್ಯ ಎಂಬುದು ತಿಳಿಯುತ್ತದೆ.



ಇರಲಿ – ತನ್ನ ಅಭಿಮಾನಿಗಳು ಇಷ್ಟಪಡುವಂಥ ಒಂದು ಮಾತು ಆಡುವುದರ ಮೂಲಕ ಅವರಿಗೆ ಇನ್ನಷ್ಟು ಹತ್ತಿರ ಆಗಿಬಿಡಬಹುದು. ಮತ್ತಷ್ಟು ಜನರ ದ್ವೇಷಕ್ಕೂ ಗುರಿಯಾಗಬಹುದು. ತುಂಬ ಜನರ ಪ್ರೀತಿಗೂ ದ್ವೇಷಕ್ಕೂ ನಡುವೆ ಒಂದು 'ಒಪೀನಿಯನ್'ನ ಅಂತರ ಅಷ್ಟೇ ಇರುವುದು.

ನನ್ನ ನಂಬಿಕೆ ಏನೆಂದರೆ ಮನುಷ್ಯನಿಗೆ – ಲೀಡರೇ ಇರಲಿ; ಸಾಮಾನ್ಯನೇ ಇರಲಿ– ಸಂತೃಪ್ತಿ ತುಂಬ ಮುಖ್ಯ. ನಾವು ಏನಾದರೂ ಕೆಲಸ ಮಾಡುವುದಾದರೆ ಆ ಸಂತೃಪ್ತಿಗೋಸ್ಕರ ಮಾಡಬೇಕು. ಏನಾದರೂ ಮಾತಾಡುವುದಾದರೂ ಆ ಸಂತೃಪ್ತಿಗೋಸ್ಕರವೇ ಮಾತಾಡಬೇಕು. ಅದನ್ನು ಬಿಟ್ಟು ಇದನ್ನು ಹೇಳಿದರೆ ನಾನು ಜನರ ಕಣ್ಣಿನಲ್ಲಿ ದೊಡ್ಡವನಾಗಿ ಕಾಣಿಸಬಹುದಾ? ಜನರ ಕಣ್ಣಿನಲ್ಲಿ ಸಣ್ಣವನಾಗಬಹುದಾ, ಈ ಸಿನಿಮಾವನ್ನು ಮಾಡಿದರೆ ದೊಡ್ಡವನಾಗಿ ಕಾಣಿಸಬಹುದಾ, ಸಣ್ಣವನಾಗಿ ಕಾಣಿಸಬಹುದಾ ಎಂಬುದು ತಲೆಯಲ್ಲಿ ಬಂದರೆ – ಆ ಆಲೋಚನೆ ಬಂದಾಗಲೇ ನೀವು ಸಣ್ಣವರಾಗಿ ಆಗಿದೆ. ಅದಕ್ಕಿಂತ ಸಣ್ಣವರಾಗುವುದು ಏನೂ ಉಳಿದಿಲ್ಲ. ಯಾಕೆಂದರೆ ನಿಮ್ಮ ಬದುಕು ನಿಮ್ಮ ಕೈಯಲ್ಲಿಲ್ಲ. ಯಾರೋ ಒಬ್ಬರು ಹೇಳ್ತಾರೆ, 'ಸರ್ ನೀವು ತುಂಬ ಚೆನ್ನಾಗಿ ಕಾಮಿಡಿ ಮಾಡ್ತೀರಾ. ಅದನ್ನೇ ಮುಂದುವರಿಸಬೇಕು' ಎಂದು. ಅವನು ನನ್ನನ್ನು ಹೊಗಳುತ್ತಿದ್ದಾನೆ ಎಂದು ಉಬ್ಬಿದರೆ ಅದು ತಪ್ಪು ತಿಳಿವಳಿಕೆ. ಯಾಕೆಂದರೆ ಅವನು ನನ್ನನ್ನು ಸೀಮಿತಗೊಳಿಸುತ್ತಿದ್ದಾನೆ. ನಾನು ಅದನ್ನು ಅನುಸರಿಸಲೇಬೇಕು; ಯಾಕೆಂದರೆ ಅವನು ತುಂಬ ಸ್ವೀಟ್ ಆಗಿ ಹೇಳ್ತಿದ್ದಾನೆ. ನೀವು ಅವನ ಮಾತನ್ನು ಮೀರಲು ಯತ್ನಿಸಿದರೆ ಅವನಿಗೆ ನಿಮ್ಮ ಮೇಲಿದ್ದ ಅಭಿಮಾನ ಹೊರಟು ಹೋಗಬಹುದು. ಅಲ್ಲಿಗೆ ನಮ್ಮ ಕತೆ ಮುಗಿಯಿತು.

ನಾನು ಇದನ್ನೆಲ್ಲ ಮೀರಿ ಬೆಳೆದಿದ್ದೀನಿ ಎಂದು ಹೇಳುವುದಿಲ್ಲ. ಆದರೆ ಆ ಪ್ರಯತ್ನದಲ್ಲಿದ್ದೇನೆ. ಜನರ ಸ್ವೀಕಾರ, ತಿರಸ್ಕಾರಗಳನ್ನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳದ ರೀತಿಯಲ್ಲಿ ಬದುಕಬೇಕು ಎಂಬುದು ನನ್ನ ಆಲೋಚನೆ. ಹಾಗಾಗಿ ಈವತ್ತಿಗೂ ನಾನು ಹಂಚಿಕೊಳ್ಳುವ ಮಾತುಗಳು, ಫೋಟೊಗಳು ಎಲ್ಲವೂ ಸಾಮಾನ್ಯವಾಗಿಯೇ ಇರುತ್ತವೆಯೇ ಹೊರತು, ನಾನೇನೋ ಆಗಿಬಿಟ್ಟಿದೀನಿ ಅಂತ ಪ್ರೂವ್ ಮಾಡಿಕೊಳ್ಳುವ ಹಂಬಲ ಖಂಡಿತ ನನಗಿಲ್ಲ. ಯಾಕೆಂದರೆ ನಾನು ಏನೂ ಆಗಿಲ್ಲ ಅನ್ನೋದು ನನಗೆ ಗೊತ್ತು. ಏನಾದ್ರೂ ಆಗಿದ್ರೆ ಅದು ಜನರ ಕಣ್ಣಿನಲ್ಲಿ; ಅದು ಅವರ ಅನಿಸಿಕೆ. ನಾನದಕ್ಕೆ ಹೇಗೆ ಜವಾಬ್ದಾರನಾಗಲಿ?

**◆ ಆದರೆ ನಟನೆಯ ವೈಯಕ್ತಿಕ ಒಲವು ನಿಲುವುಗಳ ಕಾರಣ ಒಡ್ಡಿ ಆ ನಟ/ನಟಿಯ ಸಿನಿಮಾವನ್ನು ನೋಡಬೇಕೆ ಬೇಡವೇ ಎಂದು ನಿರ್ಧಾರವಾಗುತ್ತಿರುವುದು ಅಪಾಯಕಾರಿ ಬೆಳವಣಿಗೆ ಅಲ್ಲವೇ?**

'ನಾನು ಒಂದು ಪಂಥದವನು' ಎಂಬುದು ತುಂಬ ತಪ್ಪು ವ್ಯಾಖ್ಯಾನ ಅನಿಸುತ್ತದೆ ನನಗೆ. ನಾನು ಹಿಂದೂ ಧರ್ಮದವನು; ಆದರೆ ನಾನೇ ಹಿಂದೂ ಧರ್ಮ ಅಲ್ಲ. ನಾನು ಕರಾವಳಿ ಪ್ರದೇಶದವನು; ನಾನೇ ಕರಾವಳಿ ಅಲ್ಲ. ನಾನು ಮನುಷ್ಯ. ಈ ಎರಡರ ನಡುವಿನ ವ್ಯತ್ಯಾಸ ಇದೆಯಲ್ಲ. ಆ ವ್ಯತ್ಯಾಸ ಇಂದು ಮಸುಕಾಗಿದೆ. ನನ್ನ ಪಕ್ಕದಲ್ಲಿ ಕೂತವನೊಬ್ಬ, 'ನಾನೊಬ್ಬ ಮುಸ್ಲಿಮ್ ಧರ್ಮದವನು' ಎಂದಾಕ್ಷಣ ನನಗೆ ಯಾಕೆ ಸಿಟ್ಟು ಬರಬೇಕು? ನಾನೂ ಒಂದಕ್ಕೆ ಸೇರಿದೀನಿ, ನೀನೂ ಒಂದಕ್ಕೆ ಸೇರಿದೀಯಾ. ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ. ಅದೂ ನಾನು ನನ್ನ ದಾರಿಯನ್ನು ಅನುಸರಿಸುತ್ತೇನೆ ಅನ್ನುವುದಾದರೆ ಮಾತ್ರ. ಎಷ್ಟೋ ಜನಕ್ಕೆ ಆ ದಾರಿ ಗೊತ್ತಿಲ್ಲ, ಅದರ ಭಾವ ಗೊತ್ತಿಲ್ಲ. ಅದರ ಧ್ವನಿ ಗೊತ್ತಿಲ್ಲ. ಈ ಎಲ್ಲವೂ ಗೊತ್ತಿರುವವರಿಗೆ ಬೇರೆಯವರ ದಾರಿಯ ಬಗ್ಗೆಯೂ ಗೌರವ ಇದ್ದೇ ಇರುತ್ತದೆ.

ರಾಮಕೃಷ್ಣ ಪರಮಹಂಸರು ಒಮ್ಮೆ ಜ್ಞಾನೋದಯ ಆದಮೇಲೆ ಎಷ್ಟೋ ತಿಂಗಳ ಕಾಲ ಮುಸ್ಲಿಮ್ ಆಗಿದ್ದರಂತೆ. ಕಾಳಿದೇವಿಯ ಪೂಜೆಯನ್ನೂ ಮಾಡ್ತಿರ್ಲಿಲ್ವಂತೆ. ಆ ದಾರಿಯಲ್ಲಿಯೂ ಅವರು ಸಾಕ್ಷಾತ್ಕಾರ ಪಡೆದುಕೊಂಡು ಮತ್ತೊಂದು ದಾರಿಗೆ ಹೋದರಂತೆ. ಹೀಗೆ ಎಲ್ಲ ದಾರಿಗಳಲ್ಲಿಯೂ ಸಾಕ್ಷಾತ್ಕಾರ ಮಾಡಿಕೊಂಡು ಅವರು ಹೇಳಿದ್ದು, 'ಈಗ ನಾನು ತುಂಬಾ ಖಚಿತವಾಗಿ ಹೇಳಬಲ್ಲೆ; ಎಲ್ಲ ದಾರಿಗಳೂ ಒಂದೇ ಕಡೆಗೆ ನಮ್ಮನ್ನು ತಲುಪಿಸುತ್ತವೆ'. ನಾನು ಅಧ್ಯಾತ್ಮದ ಪಥದಲ್ಲಿದ್ದರೆ, ನಾನದನ್ನು ಓದಿಕೊಂಡಿದ್ದರೆ, ಇನ್ನೂ ನಾನು ನನ್ನದು ಅವನದು ಎಂದು ತರತಮ ಮಾಡುತ್ತೇನೆಂದರೆ ಅದು ನನ್ನ ಅಹಂಕಾರದ ಪ್ರತಿಫಲ ಮಾತ್ರ.

ಮನುಷ್ಯ ತಾನು ಪೊಳ್ಳು ಎನ್ನುವುದನ್ನು ಹೇಗೋ ಅರ್ಥ ಮಾಡ್ಕೊಂಡಿದಾನೆ. ಆದರೆ ಆ ಖಾಲಿತನವನ್ನು ದಿಟ್ಟಿಸುವುದಕ್ಕೆ ಅವನಿಗೆ ಆಗ್ತಾ ಇಲ್ಲ. ನಾನು ನಟ ಎಂಬುದನ್ನು ಬಿಟ್ಟು ಬೇರೆ ಏನಾದರೂ ನೆಚ್ಚಿಕೊಳ್ಳಲಿಕ್ಕೆ ಇದ್ದರೆ ಮಾತ್ರ ನಾನು ರಸ್ತೆಯಲ್ಲಿ ಆರಾಮವಾಗಿ ಓಡಾಡಬಹುದು. ಅದಿಲ್ಲದಿದ್ದರೆ ಪ್ರತಿಸಲವೂ ನಾನು ನಟ ಎಂಬುದನ್ನು ಸಾಬೀತುಮಾಡುವ ದರ್ದಿಗೆ ಬೀಳುತ್ತೇನೆ. ಯಾಕೆಂದರೆ ಅದೊಂದು ಅಸ್ಮಿತೆ ಬಿದ್ದು ಹೋದರೆ ಯಾವುದೂ ಇರುವುದಿಲ್ಲ. ಎಲ್ಲ ಜನರೂ ಯಾವುದೋ ಒಂದು ಅಸ್ಮಿತೆಗಾಗಿ ಹುಡುಕಾಡುತ್ತಿರುತ್ತಾರೆ. ತಮ್ಮೊಳಗಿನ ಖಾಲಿತನವನ್ನು ಮುಚ್ಚಿಕೊಳ್ಳಲು ಏನೇನೋ ಮಾಡುತ್ತಿರುತ್ತಾರೆ. ಯಾವಾಗ ನಾವು ನಮ್ಮೊಳಗಿನ ಖಾಲಿತನವನ್ನು ದಿಟ್ಟಿಸಿ ನೋಡುವ ಸ್ಥೈರ್ಯ ಪಡೆದುಕೊಳ್ಳುತ್ತೇವೆಯೋ, ಅದರ ಜೊತೆಗೆ ಮಾತಾಡಿಕೊಳ್ಳುವ ಶಕ್ತಿ ಬೆಳೆಸಿಕೊಳ್ಳುತ್ತೇವೆಯೋ ಆಗ ನಮಗೆ ನಿಜವಾಗಲೂ ಯಾವುದು ಮುಖ್ಯ ಎಂಬುದು ತಿಳಿಯುತ್ತದೆ.

ಚಿತ್ರಗಳು: ಕೆ. ಎನ್. ನಾಗೇಶ್‌ಕುಮಾರ್